
SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand<br>District Governor 2024-25 | Rtn. K. Sooryanarayana Udpa<br>President, Mob: 99009 66114 | Rtn. N.G. Usha<br>Secretary, Mob : 81975 92278 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –27 ದಿನಾಂಕ : 15–01–2025

## ದಿನಾಂಕ: 15.01.2025 ರ ವಾರದ ಸಭೆಯ ವರದಿ

ದಿನಾಂಕ 15.01.2025 ರಂದು ನಮ್ಮ ರೋಟರಿ ಕ್ಲಬ್‌ನ ಪಿತಾಮಹಾ ಎಂದು ಪ್ರೀತಿಯಿಂದ ಕರೆಸಿಕೊಳ್ಳುವವರು, ರೋಟರಿ ಜಿಲ್ಲೆ 3180 ರ ಯಶಸ್ವಿ ಜಿಲ್ಲಾ ಗವರ್ನರ್‌ರವರು ಆಗಿರುವ ಹಾಗೂ ಮ್ಯಾಚಿಂಗ್ ಗ್ರಾಂಟ್ ಮತ್ತು ಗ್ಲೋಬಲ್ ಗ್ರಾಂಟ್‌ನ ಅಡಿಯಲ್ಲಿ ಹಲವಾರು ಸಮುದಾಯ ಸೇವೆಗೆ ಕಾರಣರಾಗಿರುವ ರೊ.ಪಿಡಿಜಿ. ಡಾ. ಪಿ. ನಾರಾಯಣರವರು ಇತ್ತೀಚೆಗೆ ಕುಟುಂಬದವರೊಂದಿಗೆ ದಕ್ಷಿಣಾ ಆಫ್ರಿಕಾಕ್ಕೆ ಪ್ರವಾಸಕೈಗೊಂಡ ಹಿನ್ನೆಲೆಯಲ್ಲಿ ಮತ್ತು ಅದರಲ್ಲಿ ವಿಶೇಷವಾಗಿ ಆಫ್ರಿಕನ್ ಸಫಾರಿ ವೀಕ್ಷಣೆಯ ಅನುಭವವನ್ನು ನಮ್ಮೊಂದಿಗೆ ಹಂಚಿಕೊಂಡರು. ಅಲ್ಲದೇ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಹೆಚ್.ಎಸ್. ಮೋಹನ್‌ರವರು ವೀಡೀಯೋ ಪ್ರಾತ್ಯಕ್ಷಿಕೆಗೆ ಸಹಕರಿಸಿದ್ದರು ವೇದಿಕೆಯಲ್ಲಿ ಅಂದಿನ ಸಭೆಯ ಮುಖ್ಯ ಅತಿಥಿಗಳಾಗಿ ರೊ.ಪಿಡಿಜಿ. ಡಾ. ಪಿ. ನಾರಾಯಣರವರು, ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು, ಕಾರ್ಯದರ್ಶಿ ರೊ. ಎನ್.ಜಿ. ಉಷಾರವರು ಉಪಸ್ಥಿತರಿದ್ದರು.







ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಕಿಶೋರ್ ಶೀರನಾಳಿಯವರು "ಜಯತು ಜಯ ವಿಠಲ ನಿನ್ನ ನಾಮವು ಶಾಂತಿಧಾಮವು ಸೌಖ್ಯಧಾರಾಮ" ಎಂಬ ಹಾಡನ್ನು ಹಾಡಿ ಪ್ರಾರ್ಥಿಸಿದರು. ನೂತನ ರೋಟರಾಕ್ಟ್ ಕ್ಲಬ್‌ನ ಸಹ ಕಾರ್ಯದರ್ಶಿ ಕು. ನಿಸರ್ಗರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಪ್ರಕಟಣೆಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಈ ವಾರ ತಮ್ಮ ಹುಟ್ಟು ಹಬ್ಬ ಆಚರಿಸಿಕೊಂಡ ರೊ.ರಮಾಗೋಪಾಲ್‌ರವರನ್ನು ವೇದಿಕೆಗೆ ಆಹ್ವಾನಿಸಿ, ಮುಖ್ಯ ಅತಿಥಿ ರೊ.ಪಿಡಿಜಿ. ಡಾ. ಪಿ. ನಾರಾಯಣರವರಿಂದ ನೆನಪಿನ ಕಾಣಿಕೆ ಕೊಡಿಸುವುದರ ಮೂಲಕ ಆಶೀರ್ವಾದ ಮತ್ತು ಅಭಿನಂದನೆಯನ್ನು ಸಲ್ಲಿಸಲಾಯಿತು. ಉಡುಪಿಯ ಕೀಮ್‌ಸ್ಟಾರ್ ಸಂಸ್ಥೆಯವರು ಉತ್ತಮ ವೈದ್ಯರು ಹಾಗೂ ಆಸ್ಪತ್ರೆಯ ಉತ್ತಮ ಆಡಳಿತ ನಿರ್ವಹಣೆಗೆ ಕೊಡುವ ರಾಜರತ್ನ ಫಿಲಂ ಪ್ರಶಸ್ತಿಯು 2024ರಲ್ಲಿ ನಮ್ಮ ಕ್ಲಬ್ ರೊ. ಡಾ. ರಕ್ಷಾರಾವ್‌ರವರಿಗೆ ದೊರಕಿದೆ. ನಮ್ಮ ಕ್ಲಬ್ ವತಿಯಿಂದ ಅವರಿಗೆ ಪ್ರಶಸ್ತಿ ಪತ್ರವನ್ನು ವಿತರಿಸಿ ಡಾ. ಪಿ. ನಾರಾಯಣ್ ರವರು ಹಾಗೂ ಅಧ್ಯಕ್ಷರು ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ನೇಪಾಳದಿಂದ ಹಿಮಾಲಯ ಪರ್ವತದ ಎವರೆಸ್ಟ್ ಬೇಸ್ ಕ್ಯಾಂಪ್‌ಗೆ (17500 ಅಡಿ ಎತ್ತರದ) ಅವರ ಮಗಳೊಂದಿಗೆ ಪರ್ವತಾರೋಹಣ ಮಾಡಿದ ಸಾಹಸಕ್ಕಾಗಿ ಕೊಡಮಾಡಿದ ಪ್ರಶಸ್ತಿ ಪತ್ರದ ಬಗ್ಗೆಯೂ ವಿವರಿಸಲಾಯಿತು. ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಮುಂಬರುವ ರೋಟರಿ ಜಿಲ್ಲಾ ಕಾನ್ಫರೆನ್ಸ್ ಬಗ್ಗೆ ತಿಳಿಸಿದರು.

2ನೇ ಪುಟಕ್ಕೆ

## ಈ ವಾರದ ಸಭೆ

**(ಬದಲಾದ ಸ್ಥಳ ಮತ್ತು ದಿನಾಂಕವನ್ನು ಗಮನಿಸಿ)**

**ದಿನಾಂಕ : 21-01-2025 ಮಂಗಳವಾರ ಸಂಜೆ 6:30**

ಸ್ಥಳ: **ರೋಟರಿ ಕ್ಲಬ್ ಸಭಾಂಗಣ, ನ್ಯೂಟೌನ್, ಪೋಲಿಸ್ ಸ್ಟೇಷನ್ ಹತ್ತಿರ, (ಉಂಬಳೆ ಬೈಲು ರಸ್ತೆ) ಭದ್ರಾವತಿ**

**ಭದ್ರಾವತಿ ರೋಟರಿ ಕ್ಲಬ್‌ನ ಚಾರ್ಟರ್ ಡೇ ಹಾಗೂ ಜಂಟಿ ಸಭೆ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ




ಮುಖ್ಯ ಅತಿಥಿಗಳಾದ ರೊ.ಪಿಡಿಜಿ. ಡಾ.ಪಿ.ನಾರಾಯಣರವರು ಮಾತನಾಡಿ ಡಿಸೆಂಬರ್ ಕೊನೆಯ ವಾರದಲ್ಲಿ ನಮ್ಮ ಕುಟುಂಬದ 6 ಜನ ಸದಸ್ಯರು ಕೀನ್ಯಾಕ್ಕೆ ಪ್ರವಾಸ ಹೋಗಿದ್ದೆವು. ಕಗ್ಗತ್ತಲ ಖಂಡ ಎಂದುಕೊಂಡಿದ್ದ ನಮಗೆ ಆ ಒಂದು ವಾರದ ಪ್ರವಾಸ ನಮ್ಮ ಕಲ್ಪನೆಯನ್ನು ಸುಳ್ಳಾಗಿಸಿದೆ. ಆ ದೇಶ ಎಲ್ಲಾ ದೇಶದಂತೆ ಜೊತೆಗೆ ಸಾಗಿದೆ. ಆ ದೇಶದಲ್ಲಿ ಸ್ವಚ್ಛವಾದ ನಗರ, ಆದರಾತಿಥ್ಯ, ಆತ್ಮೀಯವಾದ ವಾತಾವರಣ ಎಲ್ಲವೂ ದೊರಕಿದೆ. ಶಿವಮೊಗ್ಗೆಯಿಂದ ಸುಮಾರು ಜನರು ಅಲ್ಲಿ ಆ ದೇಶಕ್ಕೆ ಗುಳೆ ಹೋಗಿದ್ದಾರೆ ಎಂದರು.

ಕೀನ್ಯಾದಲ್ಲಿ ಪ್ರಾಣಿಗಳ ಸ್ವಚ್ಛಂದವಾಗಿರುವ ಸ್ಥಳಗಳಿಗೆ ಭೇಟಿಕೊಟ್ಟಿದ್ದೇವೆ. ಒಂದೊಂದು ಸಫಾರಿಏರಿಯಾ ಸುಮಾರು ಒಂದು ತಾಲೂಕಿನಷ್ಟಾಗುತ್ತದೆ. ಪ್ರಾಣಿಗಳು ಅಲ್ಲಿ ಪ್ರಾಕೃತಿಕವಾಗಿ ಓಡಾಡಿಕೊಂಡಿವೆ. ನಮಗೆ ವಸತಿ ಸೌಕರ್ಯಕೂಡ ಆ ಪ್ರದೇಶಗಳ ಅಕ್ಕಪಕ್ಕದಲ್ಲಿತ್ತು. ರೂಮಿನ ಸುತ್ತ ವಿದ್ಯುತ್ ಬೇಲಿಯಿತ್ತು. ವಿಶಿಷ್ಟ ಪ್ರಾಣಿಗಳ ಅನುಭವ ನಮಗೊದಗಿತು. ಅಲ್ಲಿ ಪ್ರಾಣಿಗಳು ಗುಂಪು ಗುಂಪಾಗಿ ಓಡಾಡುತ್ತವೆ. ನಾವುಗಳು ಅವುಗಳ ಮದ್ಯದಲ್ಲಿಯೇ ವಾಹನದೊಂದಿಗೆ ಹೋದಾಗಲೂ ಯಾವುದೇ ತೊಂದರೆ ಮಾಡುವುದಿಲ್ಲ ಎಂದರು.

ಕೀನ್ಯಾದ ಭಾರತೀಯರು ನಮ್ಮನ್ನು ತುಂಬಾ ಆತ್ಮೀಯವಾಗಿ ಸ್ವಾಗತಿಸಿದರು. ನಾವು ಸಾಕಷ್ಟು ದಾಖಲೆಗಳನ್ನು ಒದಗಿಸಿದಲ್ಲಿ ನಿಮಗೆ ಆನ್‌ಲೈನ್‌ನಲ್ಲಿ ವೀಸಾ ದೊರಕುತ್ತದೆ. ಅಲ್ಲದೇ ಪಕ್ಕದ ನೈರೋಬಿಯಲ್ಲಿ ರಾಷ್ಟ್ರೀಯ ವಸ್ತು ಸಂಗ್ರಹಾಲಯವಿದೆ. ಅಲ್ಲಿ ಆರಂಭದಲ್ಲಿ ಸಂಕೇತಕ್ಕಾಗಿ ಮಡಿಕೆಗಳನ್ನು ಸಂಗ್ರಹಿಸಿಟ್ಟಿದ್ದಾರೆ. ರೆವಲ್ಯೂಷನ್‌ನ ಪೂರಾ ಚರಿತ್ರೆಯನ್ನು ಅಧ್ಯಯನಕ್ಕಾಗಿ ಇಟ್ಟಿದ್ದಾರೆ. (ಇಲ್ಲಿ ಹೆಚ್ಚಿನ ಅಧ್ಯಯನಕ್ಕಾಗಿ ಅವಕಾಶವಿದೆ) ಇಲ್ಲಿ ಹಾವುಗಳ ಪಾರ್ಕ್ ಮತ್ತು ಜಿರಾಫೆ ಪಾರ್ಕ ಸಹ ಇದೆ. ಅಲ್ಲಿ ಹಾವುಗಳು ಸ್ವಚ್ಛಂದವಾಗಿ ವಿಹರಿಸುತ್ತವೆ. ಹಾಗೇ ಜಿರಾಫೆಯೂ ಕೂಡ. ಇಲ್ಲಿ ಭೂಮಿಯ ಸಮಭಾಜಕ ಗೆರೆ ಹಾದು ಹೋಗಿದೆ. ಅದನ್ನು ವಿಶೇಷವಾಗಿ ದರ್ಶಿಸುತ್ತಾರೆ. ಆದರೆ ಅಲ್ಲಿನ ಕೆಲವರು ಸಮಭಾಜಕ ಗೆರೆಯ ಆಕಡೆ ಈ ಕಡೆ ಆಗುವ ವ್ಯತ್ಯಾಸವನ್ನು ಪ್ರವಾಸಿಗರಿಗೆ ತೋರಿಸುತ್ತಾರೆ. ಆದರೆ ಸಮರ್ಪಕವಾಗಿಲ್ಲವೆಂದರು.

ಆಫ್ರಿಕಾದ ನೃತ್ಯ ವಿಶೇಷವಾದದ್ದು. ಇಲ್ಲಿನ ಹಳ್ಳಿಗಳು ಟಿಪಿಕಲ್ ಆಫ್ರಿಕನ್ ವಿಲೇಜ್ ಆಗಿದ್ದು, ಆ ಪ್ರದೇಶಗಳಲ್ಲಿ ಬುಡಕಟ್ಟು ಜನಾಂಗಗಳು ವಾಸಿಸುತ್ತಾರೆ. ಅಲ್ಲಿ ಒಬ್ಬೊಬ್ಬ ಗಂಡಸಿಗೆ 10–12 ಹೆಂಡಂದಿರಿರುತ್ತಾರೆ. ಪೌರುಷ ತೋರಿದರೆ (ಹೆಚ್ಚು ಜಂಪ್ ಮಾಡಿದರೆ) ಇಲ್ಲಿ ಹೆಣ್ಣು ಒಲಿಯುತ್ತಾಳೆ. ಹೆಚ್.ಐ.ವಿ. ಬಗ್ಗೆ ಕೇಳಿದರೆ ಅಲ್ಲಿ ಸರಿಯಾದ ಉತ್ತರವಿಲ್ಲ.

ಇಲ್ಲಿನ ಕಾಡುಗಳಲ್ಲಿ ಇಲ್ಲಿ ಸಿಂಹಗಳು, ಕಾಡೆಮ್ಮೆಗಳು, ಜಿಂಕೆಗಳು ಗುಂಪು ಗುಂಪಾಗಿ ಮನುಷ್ಯರಿದ್ದಲ್ಲಿಗೆ ಬರುತ್ತವೆ. ಇಲ್ಲಿ ಕೋತಿಗಳು ಸಹ ಇದ್ದಾವೆ. ಇವಕ್ಕೆಲ್ಲಾ ಮನುಷ್ಯತ್ವದ ಅರಿವಿದೆ. ಏಕೆಂದರೆ ಅವುಗಳು ಮನುಷ್ಯನಿಗೆ ಹಾನಿ ಮಾಡುವುದಿಲ್ಲ ಎಂದು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದ ರೊ.ಡಾ.ಪಿ.ನಾರಾಯಣ್‌ರವರು ಸಿಂಹಗಳು ವಾಹನದ ಹತ್ತಿರವೇ ಗುಂಪುಗಳಾಗಿ ಸುಳಿಯುತ್ತವೆಯಾದರೂ ಯಾರಿಗೂ ಹಾನಿ ಮಾಡುವುದಿಲ್ಲ.

ಇಲ್ಲಿನ ಮಾರಾರಿವರ್ ಪ್ರಮುಖವಾದುದು. ಇಲ್ಲಿ ರಾತ್ರೆ ವೇಳೆಯೂ ಸಫಾರಿ ಇದೆ. ಈ ಸಫಾರಿಗಳನ್ನು ಸರ್ಕಾರ ನಿರ್ವಹಣೆ ಮಾಡಿದರೂ ಖಾಸಗಿಯವರು ಇದನ್ನು ನಡೆಸುತ್ತಾರೆ ಎಂದು ಮಾಹಿತಿ ನೀಡಿದರು. ಸಿಂಹ ಮತ್ತು ಕಾಡೆಮ್ಮೆಗಳ ಬೇಟೆಗಳನ್ನು ವೀಡಿಯೋ ತೋರಿಸಿದರು. ಬುಡಕಟ್ಟಿನವರು ಸ್ವತಃ ಅಗ್ನಿಯನ್ನು ತಯಾರು ಮಾಡುತ್ತಾರೆ. ಮೀನಿನ ಬೇಟೆಯ ಬಗ್ಗೆ ಹಾಗೂ ಆನೆಗಳು ನಡೆದ ಜಾಗದಲ್ಲಿ ಎದ್ದು ಬರುವ ಹುಳು ಹುಪ್ಪಟೆಗಳನ್ನು ತಿನ್ನಲು ಹಕ್ಕಿಗಳು ಬರುತ್ತವೆ ಎಂದರು. ಪ್ರಾಣಿಗಳು ಹೆಚ್ಚಾಗಿ ಹುಲ್ಲುಗಾವಲಿನಲ್ಲಿರುತ್ತವೆ. ರಾತ್ರಿ ಕಾಡಿಗೆ ಸಾಗುತ್ತವೆ. ಅಲ್ಲದೇ ನಾವಿದ್ದ ಸಮಯದಲ್ಲಿ ನಮಗೆ ಆರೋಗ್ಯದಲ್ಲಿ ವ್ಯತ್ಯಯವಾಗಲಿಲ್ಲ ಎಂದರು.

ರೊ. ಡಿ.ಎಸ್. ನಟರಾಜರವರು ಊಟದ ಬಗ್ಗೆ ಕೇಳಿದರು. ಎಲ್ಲಿ ಹೋದರೂ ಈಗ ಭಾರತೀಯ ಆಹಾರಗಳು ದೊರಕುವುದರಿಂದ ಯಾವುದೇ ಕಷ್ಟವಾಗಲಿಲ್ಲ ಎಂದರು.

ರೊ. ಡಾ. ರಕ್ಷಾರಾವ್‌ರವರು ಮಾತನಾಡಿ, ಅಲ್ಲಿಗೆ ಹೋಗುವಾಗ ವ್ಯಾಕ್ಸಿನೇಷನ್ ತೆಗೆದುಕೊಂಡು ಹೋಗಿದ್ದೀರಾ ಎಂಬ ಪ್ರಶ್ನೆಗೆ – ಉತ್ತರಿಸಿದ ಡಾಕ್ಟರ್ ಪೋಲಿಯೋ ಮತ್ತು ಮಲೇರಿಯಾ ವ್ಯಾಕ್ಸಿನ್ ಹಾಕಿಸಿಕೊಂಡಿದ್ದೆವು ಎಂದರು.

ರೊ.ಎನ್.ವಿ.ಭಟ್‌ರವರು ಹವಮಾನದ ಬಗ್ಗೆ ಕೇಳಿದಾಗ ಇಲ್ಲಿಯಂತೆಯೇ ಇದೆ ಎಂದರು. ರೊ. ಕಿಶೋರ್ ಶೀರನಾಳಿ ಸಂಪರ್ಕ ಕೊರತೆಯ ಬಗ್ಗೆ ಪ್ರಶ್ನಿಸಿದಾಗ ಇಲ್ಲಿಂದ ಹೋದವರು ಮತ್ತಿತರು ಆಂಗ್ಲ ಭಾಷೆಯಲ್ಲಿ ಮಾತನಾಡುತ್ತಿದ್ದುದರಿಂದ ಯಾವುದೇ ತೊಂದರೆಯಾಗಿಲ್ಲವೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ವೆಲ್ಲೋರ್‌ನ ಆಸ್ಪತ್ರೆಯೊಂದಿಗೆ ಕೈಗೊಂಡ ಗ್ಲೋಬಲ್ ಗ್ರಾಂಟ್ ಬಗ್ಗೆ ತಿಳಿಸಿದ ಡಾ.ಪಿ.ನಾರಾಯಣರವರು ಇದು ಸುಮಾರು 1.50 ಕೋಟಿ ರೋಟರಿ ಯೋಜನೆ ಎಂದು ತಿಳಿಸಿ ಆ ಬಗ್ಗೆ ವಿವರಿಸಿದರು.




ರೊ.ಪಿಡಿಜಿ.ಡಾ. ಆರ್.ಡಿ.ಪ್ರಭು, ರೊ. ಡಿ.ಎಸ್. ನಟರಾಜ್‌ರವರುಗಳು ರೊ.ಪಿಡಿಜಿ. ಡಾ.ಪಿ.ನಾರಾಯಣರವರನ್ನು ಸನ್ಮಾನಿಸಿದರು. ರೊ.ಕೆ. ಸೂರ್ಯನಾರಾಯಣ ಉಡುಪ, ರೊ.ಎನ್.ಜಿ.ಉಷಾ ಮತ್ತು ರೊ.ಭಾರ್ಗವಿ ಭಟ್‌ರವರು ವೇದಿಕೆಯಲ್ಲಿದ್ದು ಸಹಕರಿಸಿದರು. ಕೊನೆಯಲ್ಲಿ ರೊ.ಎನ್. ಜಿ. ಉಷಾರವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯ ನಂತರ ಸಭೆ ಸಮಾಪ್ತಿಯಾಯಿತು. ❖

**24, 25, 26 ಜನವರಿ 2025 'ನವೋತ್ಸವ' – ರೋಟರಿ ಜಿಲ್ಲಾ ಸಮ್ಮೇಳನ ಕಾರ್ಯಕ್ರಮವು ಸಾಕಷ್ಟು ಮನರಂಜನೆ, ಉತ್ತಮ ಭಾಷಣಕಾರರು, ಸಾಂಸ್ಕೃತಿಕ ಚಟುವಟಿಕೆಗಳು, ಮೌಲ್ಯಯುತವಾದ ಉಪಯುಕ್ತ ಕಿಟ್, ಅತ್ಯುತ್ತಮ ರುಚಿಕರವಾದ ಆಹಾರಗಳು, ಫೆಲೋಶಿಪ್ ಡಿನ್ನರ್, ತುಂಬಾ ಒಳ್ಳೆಯ ವ್ಯವಸ್ಥೆಗಳು, ಹೀಗೆ ಕಾರ್ಯಕ್ರಮದ ವಾತಾವರಣವು ಎಲ್ಲರಿಗೂ * ಮ್ಯಾಜಿಕ್ ಕ್ಷಣಗಳನ್ನು ಸೃಷ್ಟಿಸುತ್ತದೆ * ರೋಟರಿ ಮಿತ್ರರು ದಯವಿಟ್ಟು ತಮ್ಮ ಕುಟುಂಬದ ಸದಸ್ಯರೊಂದಿಗೆ ಭಾಗವಹಿಸಲು ಯೋಜಿಸಿ.**

# ಮೂಳೆ ಸಾಂದ್ರತಾ ಪರೀಕ್ಷಾ ಶಿಬಿರ













ದಿನಾಂಕ: 12.01.2025 ರ ಭಾನುವಾರದಂದು ಮೂಳೆ ಸಾಂದ್ರತಾ ಪರೀಕ್ಷಾ ಶಿಬಿರವನ್ನು ನಗರದ ಲಾಲ್ ಬಹದ್ದೂರ ಶಾಸ್ತ್ರಿ ನಗರದ ಮತ್ತು ಶಿವಮೊಗ್ಗೆಯ ಸಾರ್ವಜನಿಕರಿಗೆ ರೋಟರಿ ಯುವಕೇಂದ್ರದಲ್ಲಿ ಏರ್ಪಡಿಸಲಾಗಿತ್ತು. ಅಂದು ಬೆಳಿಗೆ 10.30 ಕ್ಕೆ ಈ ಶಿಬಿರದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ರೊ.ಡಾ. ಹೆಚ್.ಪಿ.ಶಿವಕುಮಾರ್‌ರವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಶಿಬಿರವನ್ನು ಉದ್ಘಾಟಿಸಿದರು. ರೊ. ಗಾಯತ್ರಿ ಸುಮತೀಂದ್ರರವರು" ಕಣ್ಣು ನೂರು ಸಾಲದು ಎಂಬ ದೇವಿಯ "ಪ್ರಾರ್ಥನೆ ಮಾಡಿದರು. ರೊ. ಕಿಶೋರ್ ಶೀರನಾಳಿಯವರು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಉದ್ಘಾಟಕರಾದ ರೊ.ಡಾ. ಹೆಚ್.ಪಿ. ಶಿವಕುಮಾರ್‌ರವರ ಪರಿಚಯ ಮಾಡಿದರು. ಉದ್ಘಾಟನೆಯನ್ನು ಮುಖ್ಯ ಅತಿಥಿಗಳು ದೀಪ ಬೆಳಗುವುದರ ಮೂಲಕ ನೆರವೇರಿಸಿದರು. ಇದರಲ್ಲಿ ಅಧ್ಯಕ್ಷರಾದ ರೊ.ಕೆ.ಸೂರ್ಯ ನಾರಾಯಣ ಉಡುಪ, ರೊ.ಎನ್ ಜಿ. ಉಷಾ, ರೊ.ಕಿಶೋರ್ ಶೀರನಾಳಿ, ರೊ.ಅನುರಾಧ ಶೀರನಾಳಿ, ರೊ.ಎಸ್. ಮಂಜುನಾಥ್, ರೊ.ಡಿ.ವಿ. ಸದಾನಂದ್ ಮುಂತಾದವರಿದ್ದರು.

ಮುಖ್ಯ ಅತಿಥಿಗಳಾದ ರೊ.ಡಾ. ಹೆಚ್.ಪಿ.ಶಿವಕುಮಾರ್‌ರವರು ಮಾತನಾಡಿ, ಪ್ರತೀ ವರ್ಷ ಮಾಡಲೇಬೇಕಾದ ಯೋಜಿಸಲೇಬೇಕಾದ ಶಿಬಿರವಿದು. ಇದರಿಂದ ನಮ್ಮ ಸದಸ್ಯರಿಗೂ ಸಾರ್ವಜನಿಕರಿಗೂ ಅನುಕೂಲವಾಗುತ್ತದೆ. ಮೂಳೆ ಸಾಂದ್ರತೆ ಪರೀಕ್ಷೆ ಅತ್ಯಂತ ಅಗತ್ಯವಾಗಿದೆ. ನಮ್ಮ ದೇಹಕ್ಕೆ ಮೂಳೆಗಳೇ ಆಧಾರ. ಕೀಲುಗಳು ಆರೋಗ್ಯವಾಗಿರಲು ಮೂಳೆಗಳಿಗೆ ಖನಿಜಗಳು ಬೇಕೆ ಬೇಕು. ಇಲ್ಲಿ ಕ್ಯಾಲ್ಸಿಯಂ, ಪ್ರಾಸ್ಪರಸ್, ಜಿಂಕ್ ಮುಂತಾದುವುಗಳು ಮುಖ್ಯವಾಗಿದೆ. ಹೆಂಗಸರು 60 ವರ್ಷ ಮೇಲ್ಪಟ್ಟು ಮತ್ತು ಗಂಡಸರು 70 ವರ್ಷ ಮೇಲ್ಪಟ್ಟು ಆಗಾಗ್ಗೆ ಮೂಳೆಗಳ ಪರೀಕ್ಷೆ ಮಾಡಿಸಬೇಕು ಎಂದರು. ರಕ್ತದೊತ್ತಡ, ಮಧುಮೇಹ ಕಾಯಿಲೆಗಳ ಪ್ರಮಾಣ ನೋಡಿಕೊಂಡು ನಮ್ಮ ದೇಹಾರೋಗ್ಯದ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದರು.

ಈ ಶಿಬಿರದಲ್ಲಿ ಸುಮಾರು 88 ಸಾರ್ವಜನಿಕರು, ರೋಟರಿ ಸದಸ್ಯರುಗಳು, ಪಾಲ್ಗೊಂಡುತಮ್ಮ ಮೂಳೆಗಳ ಸಾಂದ್ರತೆಯನ್ನು ಪರೀಕ್ಷಿಸಿಕೊಂಡರು ಹಾಗೂ ಡಾ. ಶಿವಕುಮಾರ್‌ರವರು ಕನ್ಸಲ್ಟೇಷನ್ ತೆಗೆದುಕೊಂಡರು. ಕೆಲವರಿಗೆ ಮಾತ್ರೆಗಳ ಸಲಹೆ ನೀಡಿ, ಸಂಬಂಧಪಟ್ಟಂತೆ ಕೆಲವು ಮಾತ್ರೆಗಳನ್ನು ಸ್ಥಳದಲ್ಲಿಯೇ ನೀಡಿದರು. ಶಿಬಿರದ ನಂತರರೋಟರಿ ಸದಸ್ಯರುಗಳಿಗೆ ಮಧ್ಯಾಹ್ನದ ಭೋಜನ ಏರ್ಪಡಿಸಲಾಗಿತ್ತು.








## ಸಂಪಾದಕೀಯ

### ಹೊಸ ವರ್ಷಕ್ಕೆ ಹೊಸ ಸಂಕಲ್ಪ ಮಾಡೋಣ..

ಹೊಸ ವರ್ಷ ಎಂದರೆ ಕೇವಲ ಕ್ಯಾಲೆಂಡರ್ ಬದಲಾವಣೆಯಲ್ಲ. 2024ರ ನೋವು-ನಲಿವು ಕಳೆದು 2025ರ ವರ್ಷವು ಹೊಸ ಸಂಭ್ರಮದಿಂದ ಹೊಸ ಕನಸುಗಳನ್ನು ಹೊತ್ತು ನಮ್ಮೆಲ್ಲರ ಬಾಳಿನ ಸಂತೋಷದ ವರ್ಷವಾಗಿರಲಿ. ಪ್ರೀತಿ ಮತ್ತು ಸಂತೋಷದಿಂದ ತುಂಬಿರಲಿ ಎಂಬ ಸದಾಶಯ ಇಟ್ಟುಕೊಳ್ಳೋಣ. ಒಂದಷ್ಟು ಹೊಸ ಚಿಂತನೆಗಳೊಂದಿಗೆ ಕೆಲವಾದರೂ ಹೊಸ ಸಂಕಲ್ಪ ಮಾಡಿ ಹೊಸ ವರ್ಷ ಆರಂಭ ಮಾಡೋಣ.

ಮೊದಲನೆಯದಾಗಿ ಆರೋಗ್ಯ ಭಾಗ್ಯಕ್ಕಾಗಿ ನಾವೆಲ್ಲರೂ ಹಿತಕರ ಆಹಾರ ಪದ್ಧತಿ ಅಳವಡಿಸಿಕೊಳ್ಳೋಣ. ಫುಟ್‌ಪಾತ್‌ನಲ್ಲಿನ ಆಹಾರಗಳು, ಜಂಕ್‌ಫುಡ್‌ಗಳಿಗೆ ವಿರಾಮ ಹಾಡೋಣ. ನಮ್ಮ ಮನೆಯಲ್ಲಿಯೇ ಸಿದ್ಧಪಡಿಸಿದ ಪೌಷ್ಟಿಕಾಂಶದ ಆಹಾರಗಳನ್ನೇ ಸೇವಿಸೋಣ. ದಿನನಿತ್ಯ ಒಂದಷ್ಟು ನಡಿಗೆ, ಕೆಲಹೊತ್ತು ವ್ಯಾಯಾಮ, ಧ್ಯಾನ, ಸೂರ್ಯ ನಮಸ್ಕಾರ ಮಾಡುವುದನ್ನು ರೂಢಿಸಿಕೊಳ್ಳೋಣ.

ಇನ್ನು ಹಳೆಯ ಹಾಗೂ ಹೊಸ ಮಿತ್ರರನ್ನು ಆಗಿಂದಾಗ್ಗೆ ಸಮಯ ಮಾಡಿಕೊಂಡು ಭೇಟಿ ಮಾಡುವುದು. ದೂರದಲ್ಲಿರುವ ಮಿತ್ರರನ್ನು ಫೋನ್ ಮೂಲಕವಾದರೂ ಮಾತನಾಡಿಸಿ, ಒಬ್ಬರಿಗೊಬ್ಬರು ನೋವು - ನಲಿವುಗಳನ್ನು ಹಂಚಿಕೊಂಡು ಸುಖ-ದುಃಖಗಳಿಗೆ ಸ್ಪಂದಿಸೋಣ.

ನಮಗಾಗಿ ದಿನವೂ ಶ್ರಮಿಸುತ್ತಿರುವ ಕುಟುಂಬದ ಸದಸ್ಯರನ್ನು, ನೌಕರ ವರ್ಗದವರನ್ನು, ನಮ್ಮ ಸುಖ-ಸಂತೋಷಗಳಿಗಾಗಿ ತಮ್ಮ ಅಮೂಲ್ಯ ಸಮಯ ನೀಡುತ್ತಿರುವವರನ್ನು ಗೌರವಿಸೋಣ. ಅವರೆಲ್ಲರೊಂದಿಗೆ ಹೊಸ ಭರವಸೆ, ನಂಬಿಕೆ ಹಾಗೂ ಪ್ರೀತಿ ತೋರುವುದರೊಂದಿಗೆ ಹೊಸ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸೋಣ.

ವೃದ್ಧರನ್ನು, ರೋಗಿಗಳನ್ನು, ಅಂಗವಿಕಲರನ್ನು, ಸ್ವಾಭಿಮಾನಿ ಬಡವರನ್ನು ಗುರುತಿಸಿ ಅವರ ಕಷ್ಟಗಳಿಗೆ ಸ್ಪಂದಿಸಿ ಸಹಕಾರ ನೀಡೋಣ. ಬಡ ವಿದ್ಯಾರ್ಥಿಗಳಿಗೆ ನೆರವಾಗೋಣ. ಅನ್ನದಾನದಿಂದ ಕ್ಷಣಿಕ ತೃಪ್ತಿಯಾದರೆ ವಿದ್ಯಾದಾನದಿಂದ ಜೀವನವಿಡೀ ತೃಪ್ತಿ ಸಿಗುತ್ತದೆ.

ಒಳ್ಳೆಯ ನಾಳೆಗಳು ನಿಮ್ಮದಾಗಲಿ. ಹೊಸ ಭರವಸೆ ಹಾಗೂ ಉತ್ಸಾಹ ವರ್ಷವಿಡೀ ನಿಮ್ಮಲ್ಲಿ ತುಂಬಿರಲಿ. ನಿಮ್ಮ ಕನಸುಗಳನ್ನು ನನಸಾಗಿಸುವ ಧೈರ್ಯ, ಶಕ್ತಿ ಹಾಗೂ ದೃಢ ಸಂಕಲ್ಪ ನಿಮ್ಮೆಲ್ಲರಲಿ. ಮಿತ್ರರೇ, ನೆನಪಿರಲಿ, ಧೈರ್ಯವಂತನ, ಸಾಹಸವಂತನ ಹಿಂದೆ ಅದೃಷ್ಟ ಲಕ್ಷ್ಮಿ ಓಡೋಡಿ ಬರುತ್ತಾಳೆ. ನನ್ನ ಕೈಲಾಗದು ಎನ್ನುವವರಿಗೆ ಅದೃಷ್ಟದ ಬಾಗಿಲು ಎಂದೂ ತೆರೆಯುವುದಿಲ್ಲ. ಒಟ್ಟಿನಲ್ಲಿ ಈ ಹೊಸವರ್ಷ ಹೊಸ ಹುರುಪನ್ನು ನೀಡಲಿ.

• ರೊ. ಎಂ. ಮಾಧವಾಚಾರ್

## ಚಿಂತನ

ಯಶಸ್ಸು ಎಂಬುದು ಆಕಸ್ಮಿಕ ಘಟನೆಯಲ್ಲ.
ಇದು ಸತತ ಪರಿಶ್ರಮ, ನಿರಂತರ ಕಲಿಕೆ,
ಸಮಯಪ್ರಜ್ಞೆ, ತ್ಯಾಗ ಮತ್ತು ಎಲ್ಲಕ್ಕಿಂತ ಮಿಗಿಲಾಗಿ
ನಾವು ಮಾಡುವ ಕೆಲಸದ ಬಗ್ಗೆ ಶ್ರದ್ಧೆ ಮತ್ತು ಪ್ರೀತಿಯ
ಫಲತಾಂಶವಾಗಿರುತ್ತದೆ.

- ರೊ. ಕೆ. ಸೂರ್ಯನಾರಾಯಣ ಉಡುಪ

## ಇಂಟರ್‍ಯಾಕ್ಟ್ ಕ್ಲಬ್ ವಲಯ ಸಮ್ಮೇಳನ










ದಿನಾಂಕ: 11-01-2025ರ ಶನಿವಾರದಂದು ನಮ್ಮ ಕ್ಲಬ್ ವತಿಯಿಂದ ಇಂಟರ್‍ಯಾಕ್ಟ್ ವಲಯ ಸಮ್ಮೇಳನ ಏರ್ಪಡಿಸಲಾಗಿತ್ತು. ಶ್ರೀ ನವೀನ್ ಕುಮಾರ್ ಮತ್ತು ಶ್ರೀ ತಿರುಮಲೇಶ್ ಡಿ. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ವಿದ್ಯಾರ್ಥಿಗಳಿಗೆ ಟ್ರೈನಿಂಗ್ ನಡೆಸಿಕೊಟ್ಟರು. ಶಿವಮೊಗ್ಗದ ಎಲ್ಲಾ ರೋಟರಿ ಕ್ಲಬ್‌ಗಳಿಂದ ಪ್ರಾಯೋಜಿಸಲ್ಪಟ್ಟಿರುವ ಇಂಟರ್‍ಯಾಕ್ಟ್ ಕ್ಲಬ್‌ನ 98 ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## Happy Birthday Wishes







U. Sridhar Kamath
16th Jan.

Suryanarayana Udpa K.
21st Jan

To,

Book Post